ಡಾ॥ಹೆಗ್ಗಪ್ಪ ಡಿ ಲಮಾಣಿ : ರೈತರಿಗೆ ಹಾನಿ ಆಗೋದಿಕ್ಕೆ ನಾವು ಬಿಡೋದಿಲ್ಲ. ಈಗ ತಾನೇ ನನ್ನ ಗಮನ ಸೆಳೆದಿದ್ದೀರಿ. ನಾನು ಇವತ್ತೇ ಅಲ್ಲಿನ ಜಿಲ್ಲಾಧಿಕಾರಿಗಳಿಂದ ಕೃಷಿ ಕಚೇರಿಯಿಂದ ಮತ್ತು ಕಾರ್ಖಾನೆಯವರಿಂದಲೂ ರಿಪೋರ್ಟ್ ತರಿಸುತ್ತೇನೆ.

ಶ್ರೀ ಬಾಬಾಗೌಡ ರುದ್ರಗೌಡ ಪಾಟೀಲ್ : ಏಕೆಂದರೆ, ಪೋಲೀಸ್ ಸ್ಟೇಷನ್ ಮುಂದೆ ಟ್ರಕ್ ನಿಂತರೆ ಅದರ ಬಾಡಿಗೆಯನ್ನು ರೈತರಿಂದ ವಸೂಲು ಮಾಡುತ್ತಾರೆ. ದಿವಸಕ್ಕೆ ಸಾವಿರ, ಎರಡು ಸಾವಿರ ರೂಪಾಯಿ ಕೊಡ್ರಿ ಅಂತ.

ಅಧ್ಯಕ್ಷರು : ಅವರು ಹೇಳುವುದನ್ನು ಕೇಳಿಕೊಂಡು ಸದನದಲ್ಲಿ ಒಂದು ಸೂಕ್ತವಾದ ಹೇಳಿಕೆ ಕೊಡಿ.

ಡಾ॥ಹೆಗ್ಗಪ್ಪ ಡಿ ಲಮಾಣಿ : ನಾನು ಎಲ್ಲ ರಿಪೋರ್ಟನ್ನು ಒಳಗೊಂಡಂತಹ ಒಂದು ರಿಪೋರ್ಟ್‌ನ್ ಸೋಮವಾರದ ದಿವಸ ಈ ಸದನಕ್ಕೆ ಒಪ್ಪಿಸುತ್ತೇನೆ.

(ಆ) ಏಪ್ರಿಲ್ ಒಂದನೇ ತಾರೀಖಿನಿಂದ ಆಡಳಿತ ಭಾಷೆ ಕನ್ನಡ ಎಂದು ಘೋಷಣೆಯಾಗಿದ್ದರೂ ಸಹ ಸರ್ಕಾರಿ ಆದೇಶಗಳು ಮತ್ತು ವರದಿಗಳೆಲ್ಲಾ ಇಂಗ್ಲೀಷ್ನಲ್ಲಿರುವುದರ ಬಗ್ಗೆ

+ಶ್ರೀ ವಾಟಾಳ್ ನಾಗರಾಜ್ (ಚಾಮರಾಜನಗರ) : ಮಾನ್ಯ ಅಧ್ಯಕ್ಷರೇ, ಇವತ್ತು ಮಂಡ್ಯ ಜಿಲ್ಲೆ ಸಕ್ಕರೆ ನಗರದಲ್ಲಿ ಈಗ ತಾನೇ ಮಾನ್ಯ ಮುಖ್ಯಮಂತ್ರಿಗಳು 11 ಗಂಟೆಗೆ ಕನ್ನಡ ಸಾಹಿತ್ಯ ಸಮ್ಮೇಳನವನ್ನು ಉದ್ಘಾಟನೆ ಮಾಡುತ್ತಿದ್ದಾರೆ ಎಂದು ಆಹ್ವಾನ ಪತ್ರಿಕೆಯಲ್ಲಿದೆ. ರಾಜ್ಯದಲ್ಲಿ ಆಡಳಿತ ಭಾಷೆ ಬಗ್ಗೆ ನಾವು ನಿರಂತರವಾಗಿ ಸರ್ಕಾರಕ್ಕೆ ಒಂದಲ್ಲ ಸಾವಿರ ಬಾರಿ ಹೇಳಿದ್ದೇವೆ. ಅನೇಕ ಬಾರಿ ಒತ್ತಡವನ್ನು ತಂದಿದ್ದೀವೆ ಆದರೂ ಸರ್ಕಾರ ತಹಲ್ವರೆಗೂ ಏಪ್ರಿಲ್ 1ನೇ ತಾರೀಖಿನಿಂದ - ನಾವು ಆಡಳಿತ ಭಾಷೆ ಎಂದು ಘೋಷಣೆ ಮಾಡಿದ್ದೇವೆ ಎಂದು ವಿಧಾನಸೌಧದ ನಾಲ್ಕು ಮೂಲೆಗಳಲ್ಲೂ ಅವರ ಭಾವಚಿತ್ರಗಳನ್ನು ಹಾಕಿ ಒಂದು ಕಡೆ ಕನ್ನಡವೇ ಸತ್ಯ ಎಂದು ಮತ್ತೊಂದು ಕಡೆ ಕನ್ನಡವೇ ನಿತ್ಯ ಎಂದು ಮುಖ್ಯಮಂತ್ರಿಗಳ ಮತ್ತು ಕನ್ನಡ ಸಂಸ್ಕೃತಿ ಸಚಿವರಾದ ವಿಶ್ವನಾಥ್ರವರ ಫೋಟೋಗಳ ಕೆಳಗಡೆ ಬರೆದಿದ್ದಾರೆ. ಮುಂದಿನ ಏಪ್ರಿಲ್ ಬರುವ ಹೊತ್ತಿಗೆ ಅಂದರೆ ಇನ್ನು ಎರಡು ತಿಂಗಳಲ್ಲಿ ಬರುತ್ತದೆ. ಈ ತಹಲ್ವರೆಗೂ ಆಡಳಿತಭಾಷೆಯಲ್ಲಿ ಆಡಳಿತ ಯಾವ ಮಟ್ಟದಲ್ಲೂ ನಡೆದಿಲ್ಲ. ಸ್ಪಷ್ಟವಾಗಿ ನಾನು ತಮಗೆ ಹೇಳುತ್ತಿದ್ದೇನೆ. ಇದು ಬರೀ ಘೋಷಣೆಯಾಗಿದೆ. ಸತ್ಯಕ್ಕೆ ದೂರವಾದ ಭರವಸೆಗಳನ್ನು ರಾಜ್ಯದ ಜನತೆಯ ಮುಂದೆ ಮಂಡಿಸುತ್ತಿದ್ದಾರೆಯೇ ಹೊರತು ಇವತ್ತಿನವರೆಗೂ ಜಾರಿ ಆಗಿಲ್ಲ. ಸರ್ವೋಚ್ಚ ನ್ಯಾಯಾಲಯ ಕೂಡ ನಮ್ಮ ಸರ್ಕಾರದ ತೀರ್ಮಾನಕ್ಕೆ ಒತ್ತನ್ನು ಕೊಟ್ಟು ಆಡಳಿತ ಭಾಷೆ ಜೊತೆಗೆ ಕನ್ನಡ ಮಾಧ್ಯಮದ ಬಗ್ಗೆ ಸರ್ಕಾರದ ನಿರ್ಧಾರವನ್ನು ಬೆಂಬಲಿಸಿ ತೀರ್ಪನ್ನು ಕೊಟ್ಟಿದ್ದರೂ ಸಹ ಆ ತೀರ್ಪು ಕೂಡ ಮೂಲೆಗುಂಪಾಗಿ ಉಳಿದಿದೆ. ಇವತ್ತಿಗೂ ಸರ್ಕಾರ ಯಾವುದೇ ಪರಿಣಾಮಕಾರಿಯಾದ ಕಾರ್ಯಕ್ರಮವನ್ನು ಹಾಕಿಕೊಂಡಿಲ್ಲ. ಪ್ರತಿ ಕನ್ನಡ ಸಾಹಿತ್ಯ ಸಮ್ಮೇಳನದಲ್ಲೂ ಉದ್ದುದ್ದವಾದ ಘೋಷಣೆಗಳನ್ನು ಮಾಡಿ ಭರವಸೆಗಳನ್ನು ನೀಡಿ, ಕನ್ನಡ ನಾಡಿನ ಜನರನ್ನು ಮೂರ್ಖರನ್ನಾಗಿ ಮಾಡುತ್ತಿದ್ದಾರೆ.

ಆ ಉದ್ದೇಶವೇ ಏಪ್ರಿಲ್ 1ನೇ ತಾರೀಖು ಆಡಳಿತ ಭಾಷೆ ಕನ್ನಡ ಮಾಡುತ್ತೇವೆಂದು ಮುಖ್ಯಮಂತ್ರಿಗಳು ಹೇಳಿದಾಗ ನಾನು ಎದ್ದು ಹೇಳಿದೆ, ಏಪ್ರಿಲ್ 1ನೇ ತಾರೀಖು ಮೂರ್ಖರ ದಿನವನ್ನಾಗಿ ಮಾಡುತ್ತಿದ್ದೀರಿ, ಖಂಡಿತ ಮಾಡಕೂಡದು ಎಂದು ಸ್ಪಷ್ಟವಾಗಿ ಹೇಳಿದೆ. ಇವತ್ತೇನಾಗಿದೆ ಎಂದರೆ, ತಮ್ಮ ಶಾಸಕಾಂಗದಲ್ಲೂ ಸ್ವಲ್ಪ ಹೆಚ್ಚು ಕಡಿಮೆ ಕನ್ನಡದ ಬೆಳವಣಿಗೆ ಆಗುತ್ತಿದೆ. ಆದರೂ ಅಲ್ಲಿ ಇಲ್ಲಿ ಇಂಗ್ಲೀಷಿದೆ. ವಿಧಾನಪರಿಷತ್ತಿನಲ್ಲಂತೂ ಕನ್ನಡ ಇಲ್ಲವೇ ಇಲ್ಲ ಬಿಡಿ. ಪಾಪ, ನಾನು ಯಾರ

ಬಗ್ಗೆಯೂ ಆಕ್ಷೇಪಣೆ ಮಾಡುತ್ತಿಲ್ಲ. ಸಭಾಪತಿಯವರಿಗೆ ಕನ್ನಡ ಬರುವುದಿಲ್ಲ. ಅದರ ಬಗ್ಗೆ ನಾನು ಈಗ ವಾದ ಮಾಡುತ್ತಿಲ್ಲ. ಇವತ್ತು ಪರಿಸ್ಥಿತಿ ಏನಾಗಿದೆ ಎಂದರೆ ಅತ್ಯಂತ ಶೋಚನೀಯವಾಗಿ ಈ ಮಾತು ಹೇಳುತ್ತಿದ್ದೇನೆ. ನಾನು ಮಾತು ಎತ್ತಿದರೆ ಎದ್ದು ಎದ್ದು ಈ ರೀತಿ ಹೇಳುತ್ತೇನೆ ಎಂದು ಯಾರೂ ಭಾವಿಸಿಕೊಳ್ಳಬಾರದು. ಇಲ್ಲಿ ಬಹಳ ಹಿರಿಯ ಸಚಿವರು ಕರ್ನಾಟಕ ವಿಕೇಂದ್ರೀಕರಣಕ್ಕೆ ಮತ್ತು ಕನ್ನಡದ ಬಗ್ಗೆ ಬಹಳ ಕಾಳಜಿ ಇರುವ ಇಬ್ಬರು ಹಿರಿಯ ಸಚಿವರಿದ್ದಾರೆ. ಶ್ರೀ ಹಾರನಹಳ್ಳಿ ರಾಮಸ್ವಾಮಿಯವರಿದ್ದಾರೆ. ಶ್ರೀ ರಂಗನಾಥ್‌ರವರಿದ್ದಾರೆ. ನಾನು ಅವರ ಬಗ್ಗೆ ಅಪಾರವಾದ ಗೌರವವನ್ನಿಟ್ಟುಕೊಂಡಿದ್ದೇನೆ. ಇವತ್ತೇನಾಗಿದೆ, ಎಲ್ಲಿಗೆ ಬಂದಿದೆ ಎಂದು ಮಾತಾಡುವಾಗ ಸ್ವಲ್ಪವೂ ಜಾರಿ ಆಗಿಲ್ಲ, ಬರೀ ಘೋಷಣೆ ಮತ್ತು ಹೇಳಿಕೆಗಳು; ಸತ್ಯಕ್ಕೆ ದೂರವಾದ ಮಾತುಗಳಲ್ಲಿ ಅವರು ಕಾಲವನ್ನು ಕಳೆಯುತ್ತಿದ್ದಾರೆ. ಇವತ್ತು ಇದಕ್ಕೆ ನಿದರ್ಶನವಾಗಿ ಇವನ್ನು ತಂದಿದ್ದೇನೆ. ಸರ್ಕಾರದ ಎಲ್ಲ ಕಡತಗಳು ಸಂಪೂರ್ಣವಾಗಿ ಇಂಗ್ಲಿಷಿನಲ್ಲಿವೆ. ಒಂದು ವಾರದಿಂದ ನಾನು ಇವನ್ನೆಲ್ಲ ತಮ್ಮ ಗಮನಕ್ಕೆ ತರಬೇಕೆಂದು ಇಟ್ಟೆ. ಈ ರಾಜ್ಯಸರ್ಕಾರದ ರಾಜ್ಯಪತ್ರ ಇದು. ಕನ್ನಡದ ಕರ್ನಾಟಕ ರಾಜ್ಯಪತ್ರ. ಇದರಲ್ಲಿ ಬಂದಿರುವ ಸರ್ಕಾರಿ ಆದೇಶಗಳೆಲ್ಲ ನೂರಕ್ಕೆ ನೂರು ಬರೀ ಇಂಗ್ಲಿಷಿನಲ್ಲಿವೆ. ಇದು ನಮ್ಮ ರಾಜ್ಯದ ಕನ್ನಡ ಆಡಳಿತದ ಒಂದು ವೈಖರಿ, ಕನ್ನಡ ಆಡಳಿತದ ಜಾಗೃತಿ ವರ್ಷದ ನೀತಿ, ಕನ್ನಡ ಜಾಗೃತಿ ವರ್ಷ ಒಂದು ಪೊಳ್ಳು ಕನ್ನಡ ಜಾಗೃತಿ ವರ್ಷ ಮಂತ್ರಿಗಳ ಕೇವಲ ಒಂದು ಉತ್ಸವವಾಗಿದೆಯೇ ಹೊರತು ಕನ್ನಡದ ಬೆಳವಣಿಗೆಗೆ ಇದು ಒಳ್ಳೆಯ ದಾಖಲೆಯಂತೂ ಆಗಿಲ್ಲ. ಆದ್ದರಿಂದ ಅತ್ಯಂತ ನೋವಿನಿಂದ ಹೇಳುತ್ತಿದ್ದೇನೆ. ಈ ಇಂಗ್ಲಿಷಿನ ಪತ್ರಗಳನ್ನೇನು ಕಳಿಸಿದ್ದಾರೆ. ಇದು ನಿಜವಾಗಲೂ ನಮಗೆಲ್ಲಾ ಅತ್ಯಂತ ಅಪಮಾನ ಮತ್ತು ಅಗೌರವ ತರುವ ವಿಷಯ. ಈ ನಾಡಿನ ಜನರಿಗೆ ಅವರು ತೋರಿಸಿದಂತಹ ಅಗೌರವ ಇದು. ಜಿಲ್ಲಾಪರಿಷತ್ತಿನಿಂದ ಬಂದಿರತಕ್ಕಂತಹ ಅನೇಕ ವರದಿಗಳು ಇಂಗ್ಲಿಷ್ನಲ್ಲಿವೆ. ಇದು ತುಮಕೂರು ಜಿಲ್ಲಾಪರಿಷತ್ತಿನವರು ಕಳಿಸಿರತಕ್ಕಂತಹ ಲೆಕ್ಕ ಪತ್ರ ವರದಿ; ಇದು ಇಂಗ್ಲೀಷ್ನಲ್ಲಿದೆ, ಇದು ನಮ್ಮ ಕನ್ನಡದ ಉದ್ಧಾರದ ಬೆಳವಣಿಗೆ, ಕನ್ನಡ ಜಾಗೃತಿ ವರ್ಷವೆಂದು ನಾವು ಹೇಳುತ್ತೇವೆ. ಕನ್ನಡ ಜಾಗೃತಿ ವರ್ಷದ ಬೆಳವಣಿಗೆ ಇದೆಂದು ನಾನು ಇದನ್ನು ಬಹಳ ನೋವಿನಿಂದ ಹೇಳುತ್ತಿದ್ದೇನೆ. ಇದು ಜಿಲ್ಲಾಪರಿಷತ್, ಹಾಸನ- ಅದರ ವರದಿ ಸಹ ಇಂಗ್ಲೀಷ್ನಲ್ಲಿದೆ. ನಮ್ಮ ಕನ್ನಡದ ಬೆಳವಣಿಗೆ ಎಷ್ಟರ ಮಟ್ಟಿಗೆ ಆಗಿದೆ ಎಂದು ಇದನ್ನು ತಮಗೆ ತೋರಿಸುತ್ತಿದ್ದೇನೆ. ಇದನ್ನೆಲ್ಲಾ ಉತ್ಸಾಹ, ಉತ್ಸುಕತೆಯಿಂದ ಶೇಖರಣೆ ಮಾಡಿ ತಮ್ಮ ಗಮನಕ್ಕೆ ತರುತ್ತಿದ್ದೇನೆ ಎಂದು ತಾವು ತಿಳಿಯಬೇಕು. ಇದು ಮಂಗಳೂರು ಜಿಲ್ಲಾಪರಿಷತ್ತದ್ದು; ಇದೂ ಇಂಗ್ಲೀಷ್ನಲ್ಲಿದೆ. ಇದು ಕೊಡಗು ಜಿಲ್ಲಾಪರಿಷತ್ತಿನದ್ದು. ಇದೂ ಕೂಡ ಇಂಗ್ಲೀಷ್ನಲ್ಲಿದೆ. ಮತ್ತು ಸರಕಾರಿ ಸ್ವಾಮ್ಯಗಳ ಉದ್ದಿಮೆ ಸಮಿತಿಯ ಸದಸ್ಯರಾಗಿದ್ದವರು ಅವರು ಸ್ನೇಹಿತರು. ಅದರ ವರದಿ 24ನೇ ಜನವರಿ 94ರಲ್ಲಿ ನೀಡಲಾಗಿದೆ. ಅದೂ ಕೂಡ ಇಂಗ್ಲೀಷ್ನಲ್ಲಿದೆ. ಇದು ಇಂಗ್ಲೀಷ್ ವರದಿ ಈ ವರ್ಷ ಕನ್ನಡದ ಜಾಗೃತಿ ವರ್ಷವೆಂದು ಆಚರಣೆ ಮಾಡತಕ್ಕಂಥಾದ್ದು ಸಾಗಿದೆ. ಇದರ ಜೊತೆಯಲ್ಲಿ ಸಾರ್ವಜನಿಕ ಲೆಕ್ಕ ಪತ್ರ ಸಮಿತಿಯ ಅಧ್ಯಕ್ಷರಾಗಿರತಕ್ಕಂತಹ ವಿಕಾಂತಯ್ಯನವರ ಸಮಿತಿಯಲ್ಲಿ ನಾನೂ ಕೂಡ ಸದಸ್ಯನಾಗಿ ಇದ್ದು ಕೊನೆಯವರೆಗೂ ಕನ್ನಡ ಕನ್ನಡವೆಂದು, ಹೆಜ್ಜೆ ಹೆಜ್ಜೆಗೂ ಹೇಳುತ್ತಾ ಬಂದೆ. ಈ ಸಾರ್ವಜನಿಕ ಲೆಕ್ಕ ಪತ್ರ ಸಮಿತಿಯ ವರದಿ ಕೂಡ ಇಂಗ್ಲೀಷಿನಲ್ಲಿದೆ. ಕನ್ನಡದಲ್ಲಿಲ್ಲ. ನೇರವಾಗಿ ನನ್ನ ಮನಸ್ಸಿನ ನೋವನ್ನು ಹೇಳುತ್ತಿದ್ದೇನೆ. ಕನ್ನಡ ಸಾಹಿತ್ಯ ಸಮ್ಮೇಳನ ಇವತ್ತು ಉದ್ಘಾಟನೆಯಾಗುತ್ತಿರುವಾಗ ಈ ನಾಡಿನ ಭಾಷೆಗೆ ರಾಜ್ಯ ಸರಕಾರ ಕೊಡತಕ್ಕಂತಹ ಮರ್ಯಾದೆ ಇದೆಂದು ನಾನು ತಮಗೆ ಹೇಳುತ್ತಿದ್ದೇನೆ. ಇದು ಅತ್ಯಂತ ಅಗೌರವ. ಸರಕಾರೀ ನೂತನ ಕಾರ್ಖಾನೆಯವರು ಹೊರಡಿಸಿತಕ್ಕಂಥಾದ್ದು ಇದು. ಕರ್ನಾಟಕ ಕೈಗಾರಿಕಾ ಪ್ರದೇಶಗಳ ಅಭಿವೃದ್ಧಿ ಮಂಡಲಿ ವರದಿ 90 ಪುಟ ಇಂಗ್ಲೀಷ್ನಲ್ಲಿದ್ದರೆ 2 ಪುಟ ಮಾತ್ರ ಕನ್ನಡದ್ದು ಇದೆ.

ಅಧ್ಯಕ್ಷರು : ಸರಕಾರವು ಅದನ್ನು ಗಮನದಲ್ಲಿಡುತ್ತದೆ.

ಶ್ರೀ ವಾಟಾಳ್ ನಾಗರಾಜ್ : ಗುಲ್ಬರ್ಗ ಜಿಲ್ಲಾಪರಿಷತ್‌ನವರದಿ ಇಂಗ್ಲೀಷಿನಲ್ಲಿದೆ, ಇದನ್ನು ನಾನು ತಮ್ಮ ಗಮನಕ್ಕೆ ತರುತ್ತೇನೆ. ನನ್ನ ಪ್ರತಿಭಟನೆ ಸೂಚಿಸಬೇಕಾಗಿದೆ.

ಶ್ರೀ ಕಾಗೋಡು ತಿಮ್ಮಪ್ಪ: ಮಾನ್ಯ ಅಧ್ಯಕ್ಷರೆ, ಮಾನ್ಯ ಸದಸ್ಯರು.....

ಶ್ರೀ ವಾಟಾಳ್ ನಾಗರಾಜ್ : ಕಾಗೋಡು ತಿಮ್ಮಪ್ಪನವರೇ, ಪ್ರತಿಸಲ ನಾನು ಎದ್ದರೆ ತಾವು ಏಳತಕ್ಕಂಥಾದ್ದು ನಿಮ್ಮ ಧರ್ಮ. ಆದ್ದರಿಂದ ನಿಮ್ಮ ಧರ್ಮ ನೀವು ಪಾಲಿಸಿ. ಅದರ ಬಗ್ಗೆ ನನ್ನ ಅಭ್ಯಂತರ ಇಲ್ಲ. ಈ ಒಂದು ನೀತಿ ಸರಿಯೇ ಎನ್ನುವುದನ್ನು ಹೇಳಿ. ನಾನು ಸರಕಾರದ ಮುಖಕ್ಕೆ ಹೇಳುತ್ತಿದ್ದೇನೆ. ಸರಕಾರೀ ನೂತನ ಕಾರ್ಖಾನೆಯ ಆಡಳಿತ ವರದಿ ಇಂಗ್ಲೀಷಿನಲ್ಲಿದೆ.

(ಇಂಗ್ಲೀಷಿನಲ್ಲಿದ್ದವರದಿಯನ್ನು ಮಾನ್ಯ ಸದಸ್ಯರು ಹರಿದು ಹಾಕಿದರು)

(ಗೊಂದಲ)

ಶ್ರೀ ವಾಟಾಳ್ ನಾಗರಾಜ್ : ಈ ವಿಧಾನಸೌಧದ ಸುತ್ತ 4 ಫಲಕಗಳನ್ನು ಹಾಕಿದ್ದೀರಿ. ಏಕೆ ಹಾಕಿದ್ದೀರಿ.

(ಗೊಂದಲ)

ಶ್ರೀ ವಾಟಾಳಾ ನಾಗರಾಜ್ : ಎಲ್ಲಿ ನಿಮ್ಮ ಸರಕಾರದ ನೀತಿ, ಯಾವುದು ಸರಕಾರದ ನೀತಿ.

ಶ್ರೀ ಬಾಬಾಗೌಡ ರುದ್ರಗೌಡ ಪಾಟೀಲ್ : ಅನುಕರಣೆ ಮಾಡುತ್ತಿದ್ದೇವೆ. ಜಿಲ್ಲಾ ಪಂಚಾಯತಿ ಸಭೆಯನ್ನು ಕರೆದಿರುವಾಗ ಮಂತ್ರಿಗಳು ಅಲ್ಲಿ ಇಂಗ್ಲೀಷಿನಲ್ಲಿ ಮಾತನಾಡುತ್ತಾರೆ. ಇದರ ಅನಿವಾರ್ಯತೆ ಇದೆ ಅಲ್ಲವೇ ?

(ಗೊಂದಲ)

ಶ್ರೀ ಜೆ.ಸಿ. ಮಧುಸ್ವಾಮಿ : ಕರಿಕೋಟ್ ಹಾಕಿಕೊಂಡು ಬನ್ನಿ.

(ಗೊಂದಲ)

ಅಧ್ಯಕ್ಷರು : ಕುಳಿತುಕೊಳ್ಳಿ .....

ಶ್ರೀ ಬಾಬಾ ಗೌಡ ರುದ್ರಗೌಡ ಪಾಟೀಲ್ : 200 ವರ್ಷಗಳ ಕಾಲ ನಮ್ಮನ್ನು ಇಂಗ್ಲೀಷಿನವರು ಆಳಿ ಹೋದರು. ಇಂಗ್ಲೀಷಿನಲ್ಲಿ ಮಾತನಾಡತಕ್ಕಂಥದ್ದು ಮೇಲ್ದರ್ಜೆ ಎನ್ನುವಂತಹ ವಾತಾವರಣ ಇಂದು ಸೃಷ್ಟಿಯಾಗಿದೆ. ಜಿಲ್ಲಾ ಪಂಚಾಯತ್ ಸಭೆಗಳನ್ನು ಅನೇಕ ಮಂತ್ರಿಗಳು ಇಂಗ್ಲೀಷಿನಲ್ಲಿ ನಡೆಸುತ್ತಾರೆ. ಅವರ ಹೆಸರುಗಳನ್ನು ನಾನು ಹೇಳುವುದಕ್ಕೆ ಹೋಗುವುದಿಲ್ಲ. ಕೆಲವು ಅಧಿಕಾರಿಗಳಿಗೆ ಇಂಗ್ಲೀಷ್ ಬರುವುದಿಲ್ಲ.ಆದರೂ ಕೂಡ ಜನ ಸಾಮಾನ್ಯರೊಂದಿಗೆ ಅವರು ಇಂಗ್ಲೀಷಿನಲ್ಲಿ ಮಾತನಾಡುತ್ತಾರೆ. ಜನಸಾಮಾನ್ಯರಿಗೆ ಇಂಗ್ಲೀಷ್ ಬರುವುದಿಲ್ಲ. ಕನ್ನಡದಲ್ಲಿಯೇ ಜನಸಾಮಾನ್ಯರೊಂದಿಗೆ ವ್ಯವಹರಿಸುವಂತಹ ಒಂದು ವ್ಯವಸ್ಥೆಯನ್ನು ಮಾಡಬೇಕಾಗಿದೆ.

ಶ್ರೀ ಕಾಗೋಡು ತಿಮ್ಮಪ್ಪ : ಕನ್ನಡದ ಬಗ್ಗೆ ಎಷ್ಟು ಕಠೋರವಾಗಿ ಹೇಳಿದರೂ ನನ್ನ ಆಕ್ಷೇಪಣೆ ಇಲ್ಲ.ಆದರೆ ಇವತ್ತು ಪತ್ರಗಳನ್ನು ಸದನಕ್ಕೆ ತಂದು ತಮ್ಮ ಆಕ್ರೋಷವನ್ನು ಅವುಗಳ ಮೇಲೆ ತೀರಿಸಿಕೊಳ್ಳತಕ್ಕಂಥ ಕ್ರಮ ಸರಿಯಲ್ಲ. ಮಾನ್ಯ ವಾಟಾಳ್ ನಾಗರಾಜ್‌ರವರಿಗೆ ಏನು ಕಳಕಳಿ ಇದೆ, ಅದನ್ನು ನಾನು ಅಭಿನಂದಿಸುತ್ತೇನೆ, ಅವರಿಗೆ ಕೃತಜ್ಞತೆಯನ್ನು ಸಲ್ಲಿಸುತ್ತೇನೆ. ಇವತ್ತು ಇವರು ಈ ರೀತಿ ಮಾಡಿದರೆ, ನಾಳೆ ಇನ್ನೊಬ್ಬರು ಇನ್ನೊಂದು ರೀತಿ ಮಾಡುತ್ತಾರೆ. ಅದು ಸರಿಯಲ್ಲ ಎಂಬುದು ನನ್ನ ಅಭಿಪ್ರಾಯ.

ಶ್ರೀ ಸಿ. ಬೈರೇಗೌಡ : ತಮ್ಮ ಸಲಹೆಯನ್ನು ಕೃತಜ್ಞತಾಪೂರ್ವಕವಾಗಿ ಅಂಗೀಕರಿಸುತ್ತೇವೆ.

ಶ್ರೀ ವಾಟಾಳ್ ನಾಗರಾಜ್ : ಸರ್ಕಾರದ ವಿರೋಧಿ ನೀತಿಯನ್ನು ಖಂಡಿಸಿ, ಇನ್ನು ಮುಂದೆ ಇಲ್ಲಿ ಸುಡುತ್ತೇನೆ.

ಶ್ರೀ ಪಿ.ಜಿ.ಆರ್.ಸಿಂಧ್ಯ : ಮಾನ್ಯ ವಾಟಾಳ್ ನಾಗರಾಜ್‌ರವರು ಹರಿದು ಬಿಸಾಡಿದ ಹಿನ್ನೆಲೆಯಲ್ಲಿ ಮತ್ತು ಕಾಗೋಡು ತಿಮ್ಮಪ್ಪನವರು ಏನು ಕೃತಜ್ಞತೆಯನ್ನು ವ್ಯಕ್ತಪಡಿಸಿದ್ದಾರೆ ಇದರ ಹಿನ್ನೆಲೆಯಲ್ಲಿ ಒಂದು ಮಾತನ್ನು ಹೇಳುವುದಕ್ಕೆ ಇಚ್ಛೆ ಪಡುತ್ತೇನೆ. ಬೆಳಗಾಂ,ಮುಂಬೈ, ಭಾಗದಲ್ಲಿ ಯಾವ ರೀತಿ ಇದೆಯೋ ಗೊತ್ತಿಲ್ಲ. ನಮ್ಮ ಕಡೆ ಸತ್ತ ಮೇಲೆ ಹಣವನ್ನು ಸ್ಮಶಾನಕ್ಕೆ ತೆಗೆದುಕೊಂಡು ಹೋಗಿ ಅದನ್ನು ಹೂತು ಹಾಕಿ ಅಥವಾ ಬೆಂಕಿ ಇಟ್ಟ ಮೇಲೆ ಊದುಬತ್ತಿ ಹಚ್ಚಿ ಸಾಂಬ್ರಾಣಿ ಹೊಗೆ ಹಾಕಿ ಎಲ್ಲರೂ ಎದ್ದು ಬರುತ್ತಾರೆ. ಹಾಗೆ ಸರ್ಕಾರದವರು ವಿಧಾನಸೌಧದ ನಾಲ್ಕೂ ದ್ವಾರಗಳಿಗೆ ನಾಲ್ಕು ಫೋಟೋಗಳನ್ನು ಹಾಕಿದ್ದಾರೆ. ಅದಕ್ಕೆ ಅವರು ಸಾಂಬ್ರಾಣಿ ಹಾಕಲಿ.

ಶ್ರೀ ಹೆಚ್. ವಿಕಾಂತಯ್ಯ : ಮಾನ್ಯ ಅಧ್ಯಕ್ಷರೇ, ಸಾರ್ವಜನಿಕ ಲೆಕ್ಕಪತ್ರ ಸಮಿತಿ ವರದಿಯ ಬಗ್ಗೆ ಪ್ರಸ್ತಾಪ ಮಾಡಿದ್ದಾರೆ. ಕನ್ನಡದಲ್ಲಿ ವರದಿಯನ್ನು ಕೊಡಬೇಕೆಂಬುದಕ್ಕೆ ಒಪ್ಪಿದ್ದೇನೆ. ನಾನು ತಮ್ಮ ಮುಖಾಂತರ ಒಂದು ಸಲಹೆ ಕೊಡುವುದಕ್ಕೆ ಇಚ್ಛೆ ಪಡುತ್ತೇನೆ. ಮಹಾರಾಷ್ಟ್ರದಲ್ಲಿ ಒಂದು ಪದ್ಧತಿ ಇದೆ. ಸಮಿತಿಗಳ ವರದಿಯನ್ನು ಮರಾಠಿ ಭಾಷೆಯಲ್ಲಿರುವುದನ್ನು ಭಾಷಾಂತರ ಮಾಡತಕ್ಕಂಥ ಕಾರ್ಯನೀತಿಯನ್ನು ಅನುಸರಿಸುತ್ತಾರೆ; ಅದೇ ರೀತಿ ಇಲ್ಲಿಯೂ ಇಂಗ್ಲೀಷ್‌ನಲ್ಲಿ ಇರತಕ್ಕಂಥ ವರದಿಯನ್ನು ತರ್ಜುಮೆ ಮಾಡಲು ಸಿಬ್ಬಂದಿಯನ್ನು ಒದಗಿಸಿಕೊಟ್ಟರೆ ಕನ್ನಡದಲ್ಲಿ ವರದಿಯನ್ನು ಕೊಡಲು ಅನುಕೂಲವಾಗುತ್ತದೆ. ಆ ಒಂದು ವ್ಯವಸ್ಥೆಯನ್ನು ಮಾಡಿ, ಅನುಮತಿ ಕೊಟ್ಟರೆ ಕನ್ನಡದಲ್ಲಿ ವರದಿಯನ್ನು ಕೊಡುವುದಕ್ಕೆ ಸಾಧ್ಯವಾಗುತ್ತದೆ.

ಶ್ರೀ ವಾಟಾಳ್ ನಾಗರಾಜ್: ಕನ್ನಡದಲ್ಲಿ ನೀವು ಬರೆಯಲೇಬೇಕು, ಕೈಯಲ್ಲಿ ಬರೆದರೂ ಚಿಂತೆಯಿಲ್ಲ.

(ಗೊಂದಲ)

ಶ್ರೀ ವಾಟಾಳ್ ನಾಗರಾಜ್: ಸರ್ಕಾರದ ಕನ್ನಡ ವಿರೋಧಿ ಧೋರಣೆಯನ್ನು ವಿರೋಧಿಸಿ ನಾನು ಧರಣಿ ಮಾಡುತ್ತಿದ್ದೇನೆ.

(ಮಾನ್ಯ ಸದಸ್ಯರಾದ ಶ್ರೀ ವಾಟಾಳ್ ನಾಗರಾಜ್‌ರವರು ಸದನದ ಬಾವಿಗೆ ಬಂದು ಕುಳಿತುಕೊಂಡರು)

ಶ್ರೀ ಹೆಚ್. ವಿಕಾಂತಯ್ಯ : ಅನೇಕ ಕಾಗದ ಪತ್ರಗಳು ಇಂಗ್ಲೀಷಿನಲ್ಲಿ ಬರುತ್ತವೆ ನಮಗೆ ತರ್ಜುಮೆ ಮಾಡಲು ಹೇಗೆ ಸಾಧ್ಯವಾಗುತ್ತದೆ; ಇದನ್ನೂ ಸಹ ಯೋಚಿಸಬೇಕು.

ಶ್ರೀ ಸಿ. ಬೈರೇಗೌಡ : ಮಾನ್ಯ ಅಧ್ಯಕ್ಷರೇ, ಬೆಂಗಳೂರಿನಲ್ಲಿ ಕನ್ನಡ ಮಾತನಾಡುವುದು ಬಹಳ ದೊಡ್ಡ ಅವಮಾನವಾಗಿದೆ.

ಶ್ರೀ ಆರ್.ವಿ. ದೇಶಪಾಂಡೆ : ಇದರ ಬಗ್ಗೆ ಸರ್ಕಾರದಿಂದ ಸ್ಪಷ್ಟೀಕರಣ ಬರಬೇಕು.

ಶ್ರೀ ಸಿ. ಬೈರೇಗೌಡ : ಇವತ್ತು ಬೆಂಗಳೂರಿನಲ್ಲಿ ಕನ್ನಡ ಮಾತನಾಡತಕ್ಕದ್ದು ಬಹಳ ದೊಡ್ಡ ಅವಮಾನ ಎಂದಾಗಿದೆ. ಆ ಅವಮಾನವನ್ನು ನಾನು ಅನುಭವಿಸಿದ್ದೇನೆ. ಜನವರಿ 30ನೇ ತಾರೀಖು ಬೆಂಗಳೂರಿನಿಂದ ತಿರುವನಂತಪುರಕ್ಕೆ ಅಧಿಕೃತ ಪ್ರವಾಸಕ್ಕೆ

ಹೋಗಬೇಕಾಗಿತ್ತು. ನಾನು ಬೆಂಗಳೂರು ವಿಮಾನ ನಿಲ್ದಾಣದಲ್ಲಿ ಪತ್ರಿಕೆ ಅಂಗಡಿಗೆ ಹೋದೆ; ಅಲ್ಲಿ ಎಲ್ಲಾ ಪತ್ರಿಕೆಗಳನ್ನು ಇಟ್ಟಿದ್ದರು. ನಾನು "ಏನಪ್ಪ ಕನ್ನಡ ಪತ್ರಿಕೆ ಇಲ್ಲವೇ ಎಂದು ಕೇಳಿದೆ" ಅದಕ್ಕೆ ಅವನು 'ಎನ್ನ ಅದು' ಎಂದು ಕೇಳಿದ. ಇಷ್ಟೇ ಅಲ್ಲ, ವಿಮಾನದಲ್ಲಿ ಕುಳಿತುಕೊಂಡಾಗ ಕೂಡ ಅಲ್ಲಿ ಎಲ್ಲಾ ಭಾಷೆಗಳ ಪತ್ರಿಕೆಗಳು ಇದ್ದವು. ಆದರೆ ಒಂದೂ ಕೂಡ ಕನ್ನಡ ಪತ್ರಿಕೆ ವಿಮಾನದಲ್ಲಿ ಇರಲಿಲ್ಲ; ಬೆಂಗಳೂರು ವಿಮಾನ ನಿಲ್ದಾಣದಲ್ಲಿ ಕನ್ನಡದಲ್ಲಿ ಮಾತನಾಡಿದ್ದೂ ಸಹ ದೊಡ್ಡ ಅಪರಾಧವಾಯಿತು. ಬೆಂಗಳೂರು ವಿಮಾನದಲ್ಲಿ ಕನ್ನಡ ಪತ್ರಿಕೆಗಳನ್ನು ಕೇಳಿದರೆ ಅದು ದೊಡ್ಡ ಅವಮಾನ ಆದಂತೆ. ಬೆಂಗಳೂರಿನಲ್ಲಿ ಇವತ್ತು ಕನ್ನಡಕ್ಕೆ ಅವಮಾನ, ಮರ್ಯಾದೆ ಆಗುತ್ತಿದೆ. ಇದನ್ನು ನಾನು ಪ್ರಥಮಬಾರಿಗೆ ಪ್ರಸ್ತಾಪ ಮಾಡುತ್ತಿಲ್ಲ. ಹಿಂದೆ ಅನೇಕ ಸಾರಿ ಇದರ ಬಗ್ಗೆ ಸರ್ಕಾರದ ಗಮನವನ್ನು ಸೆಳೆದಿದ್ದೇನೆ. ಇದನ್ನು ಸರಿಪಡಿಸಲು ಸಂಬಂಧಪಟ್ಟವರೊಡನೆ ವ್ಯವಹರಿಸಿ ಕೂಡಲೇ ಸರ್ಕಾರ ಕ್ರಮವನ್ನು ಕೈಗೊಳ್ಳಬೇಕಾಗಿದೆ. ಬೆಂಗಳೂರಿನಲ್ಲಿ ಕನ್ನಡದ ಬಗ್ಗೆ ಕಾಟಾಚಾರಕ್ಕೆ ಒಂದು ಘೋಷಣೆ ಮಾಡಿದ್ದಾರೆ. ಅದೇ ಮದ್ರಾಸ್‌ನಲ್ಲಿ ಟಿ.ವಿ.ಯಲ್ಲಿ ತಮಿಳು, ಇಂಗ್ಲೀಷ್, ಹಿಂದಿ ಬರುತ್ತದೆ. ಆದರೆ ಬೆಂಗಳೂರಿನಲ್ಲಿ ಮಾತ್ರ ಬರೀ ಹಿಂದಿ, ಇಂಗ್ಲೀಷ್‌ನಲ್ಲಿ ಬರುತ್ತದೆ. ಕನ್ನಡದ ಬಗ್ಗೆ ವಿಮಾನ ನಿಲ್ದಾಣದಲ್ಲಿ ಇಲ್ಲವೇ ಇಲ್ಲ. ಇಂತಹ ಪರಿಸ್ಥಿತಿ ಬಂದೊದಗಿದೆ. ಇದು ಅತ್ಯಂತ ನಾಚಿಕೆಗೇಡು. ತಿರುವನಂತಪುರದಿಂದ ಮದ್ರಾಸಿಗೆ ಬಂದರೆ ಅಲ್ಲಿ ಎಲ್ಲಾ ಕಡೆಯೂ ತಮಿಳಿನಲ್ಲಿ ಬರೆದಿರುತ್ತಾರೆ. ಅದೇ ತಿರುವನಂತಪುರದಲ್ಲಿ ಮಲೆಯಾಳಿ ಭಾಷೆಗೆ ಬಹಳ ಪ್ರೋತ್ಸಾಹ ಕೊಟ್ಟಿದ್ದಾರೆ. ಮದ್ರಾಸ್ ವಿಮಾನನಿಲ್ದಾಣದಲ್ಲಿ ತಮಿಳಿಗೆ, ತಿರುವನಂತಪುರ ವಿಮಾನನಿಲ್ದಾಣದಲ್ಲಿ ಮಲೆಯಾಳಿ ಭಾಷೆಗೆ ಯಾವ ರೀತಿ ಪ್ರಾಶಸ್ತ್ಯ ಕೊಟ್ಟಿದ್ದಾರೋ ಅದೇ ರೀತಿ ಬೆಂಗಳೂರು ವಿಮಾನನಿಲ್ದಾಣದಲ್ಲಿ ಕನ್ನಡಕ್ಕೆ ಪ್ರಾಶಸ್ತ್ಯ ಕೊಡಲು ಸರ್ಕಾರ ಸಂಬಂಧ ಪಟ್ಟವರೊಡನೆ ವ್ಯವಹರಿಸಿ ಕ್ರಮಕೈಗೊಳ್ಳಬೇಕು. ಇಲ್ಲಿ ಕನ್ನಡ ಎಂದರೆ ಅಷ್ಟು ಅಸಡ್ಡೆಯಾಗಿದೆ. ಕನ್ನಡ ಮಾತನಾಡುವುದೇ ಅವಮಾನ ಎಂಬಂತಾಗಿದೆ. ಇದನ್ನೆಲ್ಲಾ ಸಹಿಸಿಕೊಂಡು ಸರ್ಕಾರ ಸುಮ್ಮನೆ ಕಣ್ಣುಮುಚ್ಚಿ ಕುಳಿತುಕೊಂಡಿದೆ. ಇದರ ಬಗ್ಗೆ ಸರ್ಕಾರ ಏನೂ ಕ್ರಮ ತೆಗೆದುಕೊಳ್ಳದೇ ಇರುವುದನ್ನು ನೋಡಿದರೆ ನಿಜಕ್ಕೂ ಈ ಸರ್ಕಾರಕ್ಕೆ ಮಾನ ಮರ್ಯಾದೆ ಇಲ್ಲ ಎಂಬುದು ಗೊತ್ತಾಗುತ್ತದೆ.

(ಗೊಂದಲ)

ಶ್ರೀ ಬಿ.ಎಸ್. ಯಡಿಯೂರಪ್ಪ : ಮಾನ್ಯ ಅಧ್ಯಕ್ಷರೆ, ಇವತ್ತು ಅಖಿಲಭಾರತ ಕನ್ನಡ ಸಾಹಿತ್ಯ ಸಮ್ಮೇಳನ ಮಂಡ್ಯದಲ್ಲಿ ನಡೆಯುತ್ತಿದೆ. ಇವರಿಗೆ ಅಲ್ಲಿಗೆ ಹೋಗಲು ಯಾವ ನೈತಿಕ ಹಕ್ಕು ಇದೆ. ಸುಮ್ಮನೆ ಆಡಳಿತ ಭಾಷೆ ಮಾಡಿದ್ದೇವೆ ಎಂದು ಘೋಷಣೆ ಮಾಡಿದ್ದಾರೆ. ಆದರೆ ಕಾರ್ಯದಲ್ಲಿ ಏನೂ ಆಗಿಲ್ಲ. ಇವತ್ತು ಕನ್ನಡ ಸಾಹಿತ್ಯ ಸಮ್ಮೇಳನ ನಡೆದಿರುವಂಥ ಸಂದರ್ಭದಲ್ಲಿ ಧೈರ್ಯವಾಗಿ ಸರ್ಕಾರ ಘೋಷಣೆ ಮಾಡಬೇಕು, ಏನೆಂದರೆ, ಚಾಚೂ ತಪ್ಪದೇ ಕನ್ನಡಕ್ಕೆ ಯಾವುದೇ ಚ್ಯುತಿ ಬರದ ರೀತಿಯಲ್ಲಿ ಕನ್ನಡವನ್ನು ಸಂಪೂರ್ಣವಾಗಿ ಆಡಳಿತದಲ್ಲಿ ಜಾರಿಗೆ ತರುತ್ತೇವೆಂದು. ನನಗೆ ಬೇರೆ ಭಾಷೆಗಳ ಬಗ್ಗೆ ವಿರೋಧ ಇಲ್ಲ. ಆದರೆ ನಮ್ಮ ಕರ್ನಾಟಕದಲ್ಲಿ ನಮ್ಮ ಕನ್ನಡ ಭಾಷೆಗೆ ಹೆಚ್ಚಿನ ಪ್ರಾಶಸ್ತ್ಯ ದೊರೆಯಬೇಕು. ಈಗಾಗಲೇ ಇವರು ಘೋಷಣೆಯನ್ನು ಮಾಡಿ ಒಂದು ವರ್ಷವಾಯಿತು. ಅದರಿಂದ ಏನಾಗಿದೆ ಎಂದು ಕೇಳುವುದರಲ್ಲಿ ತಪ್ಪೇನಿದೆ? ಇವತ್ತು ಸಾಹಿತ್ಯ ಸಮ್ಮೇಳನಕ್ಕೆ ಹೋಗುವ ನೈತಿಕ ಹಕ್ಕು ಇವರಿಗೆ ಎಲ್ಲಿದೆ?

ಶ್ರೀ ಆರ್.ವಿ. ದೇಶಪಾಂಡೆ : ಕನ್ನಡವನ್ನು ಜಾರಿಗೊಳಿಸಿದ್ದೇವೆ ಎಂದು ಹೇಳಿದ್ದೀರಿ. ಆದರೂ ಸಹ ಏತಕ್ಕೆ ಈ ಪ್ರಕಾರ ಆಗುತ್ತಿದೆ? ತಾವು ಇದರ ಬಗ್ಗೆ ಸ್ಪಷ್ಟವಾಗಿ ಹೇಳಬೇಕು. ಹೌದು, ನಾವು ಘೋಷಣೆ ಮಾಡಿದ್ದೇವೆ; ಆದರೆ ಹೆಚ್ಚಿನ ಕೆಲಸ

ಮಾಡಲು ಆಗಲಿಲ್ಲ. ನಮ್ಮ ಕಡೆಯಿಂದ ತಪ್ಪಾಗಿದೆ ಕ್ಷಮಿಸಿ ಎಂದು,- ಈ ಪ್ರಕಾರ ಸರ್ಕಾರ ಹೇಳಲಿ.

ಶ್ರೀ ಬಿ.ಎಸ್. ಯಡಿಯೂರಪ್ಪ : ಕನ್ನಡ ಸಾಹಿತ್ಯ ಸಮ್ಮೇಳನ ನಡೆಸಲು ಇವರಿಗೆ ಏನು ಹಕ್ಕಿದೆ? ಇವತ್ತು ಮಂಡ್ಯದಲ್ಲಿ ಸಾಹಿತ್ಯ ಸಮ್ಮೇಳನ ನಡೆಯುತ್ತಿದೆ. ಈ ಸಂದರ್ಭದಲ್ಲಿ ಸರ್ಕಾರದ ಸ್ಪಷ್ಟನೆ ನಿಲುವು ಏನು ಎಂಬುದನ್ನು ತಿಳಿಸಬೇಕು. ಚಾಚೂ ತಪ್ಪದೆ ಎಲ್ಲೂ ಚ್ಯುತಿ ಬಾರದ ರೀತಿಯಲ್ಲಿ ಪ್ರಾಮಾಣಿಕವಾಗಿ ಕನ್ನಡವನ್ನು ಜಾರಿಗೊಳಿಸುತ್ತೇವೆ ಎಂದು ಹೇಳಬೇಕು.

ಶ್ರೀ ಹಾರನಹಳ್ಳಿ ರಾಮಸ್ವಾಮಿ (ಕಾನೂನು ಹಾಗೂ ಸಂಸದೀಯ ವ್ಯವಹಾರಗಳ ಸಚಿವರು) : ಮಾನ್ಯ ಅಧ್ಯಕ್ಷರೆ, ಮಾನ್ಯ ಸದಸ್ಯರುಗಳೇ, ಕನ್ನಡದ ಬಳಕೆ ಬಗ್ಗೆ ವ್ಯಕ್ತಪಡಿಸಿರತಕ್ಕಂಥ ಭಾವನೆ ಮತ್ತು ಕಳಕಳಿ ಸ್ವಾಗತಾರ್ಹವಾದುದು. ಅವರು ಸಲಹೆಗಳೂ ಕೂಡ ಸ್ವಾಗತಾರ್ಹವಾದುದು. ವಿಶೇಷವಾಗಿ ಶ್ರೀ ವಾಟಾಳ್‌ನಾಗರಾಜ್‌ರವರು ದಯಮಾಡಿ ತಮ್ಮ ಸ್ಥಾನಕ್ಕೆ ಬರಬೇಕು.

(ಸನ್ಮಾನ್ಯ ಶ್ರೀ ವಾಟಾಳ್‌ನಾಗರಾಜ್‌ರವರು ತಮ್ಮ ಸ್ಥಾನಕ್ಕೆ ಬಂದು ಕುಳಿತುಕೊಂಡರು)

ಶ್ರೀ ಹಾರನಹಳ್ಳಿ ರಾಮಸ್ವಾಮಿ : ಮಾನ್ಯ ವಾಟಾಳ್‌ನಾಗರಾಜ್‌ರವರು ಕರ್ನಾಟಕದಲ್ಲಿ ಕನ್ನಡ ಆಚರಣೆಗೆ ಬರಬೇಕು ಎಂದು ಚಳುವಳಿ ಮಾಡಿದಂಥ ನಾಯಕರು, ಮಕ್ತಾರರು ಹಾಗೂ ಹರಿಕಾರರು ಎಂದು ನಾನು ತಿಳಿದುಕೊಂಡಿದ್ದೇನೆ. ದಿವಂಗತ ಆ.ನ.ಕೃಷ್ಣರಾಯರಿಂದ ಹಿಡಿದು ಅನೇಕರು ಬೆಂಗಳೂರಿನಲ್ಲಿ ಚಳುವಳಿ ಮಾಡಿ ಬೆಂಗಳೂರು ಕನ್ನಡ ಕೇಂದ್ರ ಸ್ಥಾನವಾಗಬೇಕು ಎಂದು ಪ್ರಯತ್ನ ಮಾಡಿದ್ದಾರೆ. ನನ್ನ ಅಭಿಪ್ರಾಯದಲ್ಲಿ ಬೆಂಗಳೂರು ಕರ್ನಾಟಕದ ರಾಜಧಾನಿಯಾಗಿದೆ. ಅದು ಕನ್ನಡದ ರಾಜಧಾನಿಯಾಗಬೇಕಾಗಿದೆ. ಈ ಬಗ್ಗೆ ಇನ್ನೂ ಹೆಚ್ಚು ಕೆಲಸವನ್ನು ಮಾಡಬೇಕಾಗಿದೆ. ಸರ್ಕಾರದ ತೀರ್ಮಾನ ತಮಗೆಲ್ಲಾ ಗೊತ್ತಿದೆ. ಸರ್ಕಾರ ಕನ್ನಡವನ್ನು ಆಡಳಿತಭಾಷೆಯಾಗಿ ಸರ್ವಕ್ಷೇತ್ರಗಳಲ್ಲೂ ಜಾರಿಗೆ ತರಲು ತೀರ್ಮಾನ ಮಾಡಿದೆ. ಅದರಂತೆ ಕಾರ್ಯಕ್ರಮಗಳನ್ನು ತೆಗೆದುಕೊಂಡು ಶಾಸನಗಳನ್ನು ಕನ್ನಡದಲ್ಲೇ ಹೊರಡಿಸಿದ್ದೇವೆ. ಸುತ್ತೋಲೆಗಳನ್ನು ಸಹ ಕನ್ನಡದಲ್ಲೇ ಹೊರಡಿಸಿದ್ದೇವೆ. ಕೆಲವರು ಅಲ್ಲಿ ಇಲ್ಲಿ ಈ ಸರ್ಕಾರದ ನೀತಿಗೆ ವಿರುದ್ಧವಾಗಿ ನಡೆದುಕೊಂಡಿರಬಹುದು. ಅಂಥವರಿಗೆ ನಾವು ಸೂಕ್ತ ನಿರ್ದೇಶನವನ್ನು ಕೊಟ್ಟು ಅವರ ಮೇಲೆ ಕ್ರಮಕೈಗೊಳ್ಳಲು ಪ್ರಯತ್ನ ಮಾಡುತ್ತೇವೆ. ಜಿಲ್ಲಾ ಪರಿಷತ್ತಿನಲ್ಲಿ ಕನ್ನಡವನ್ನು ಬಿಟ್ಟು ಇಂಗ್ಲೀಷ್‌ನಲ್ಲಿ ವ್ಯವಹಾರ ಮಾಡಲು ಕಾರಣವೇ ಇಲ್ಲ. ಬಹುಶಃ ನಾನು ಏನು ತಿಳಿದುಕೊಂಡಿದ್ದೇನೆ ಎಂದರೆ ಸಾಮಾನ್ಯವಾಗಿ ಹೇಳಿಕೆಗಳನ್ನು ಕನ್ನಡದಲ್ಲಿ ಮತ್ತು ಇಂಗ್ಲೀಷ್‌ನಲ್ಲಿ ಎರಡರಲ್ಲೂ ಮಾಡುತ್ತಾರೆ. ಆದರೆ ದುರದೃಷ್ಟವಶಾತ್ ಇಂಗ್ಲೀಷಿನ ಕಾಪಿಗಳು ಮಾನ್ಯ ವಾಟಾಳ್ ನಾಗರಾಜ್‌ರವರಿಗೆ ಸಿಕ್ಕಿ ಬಿಟ್ಟಿದೆ. ಅದರ ಜೊತೆಗೆ ಕನ್ನಡದ ಕಾಪಿಯೂ ಕೂಡ ಇದೆ.

ಶ್ರೀ ವಾಟಾಳ್ ನಾಗರಾಜ್ : ಒಂದು ವಾರದಿಂದ ನಾನು ಪರಿಶೀಲನೆ ಮಾಡಿ ಎಚ್ಚರಿಕೆಯಿಂದ ಇದನ್ನೆಲ್ಲಾ ತಂದಿದ್ದೇನೆ.

ಶ್ರೀ ಹಾರನಳ್ಳಿ ರಾಮಸ್ವಾಮಿ : ಹಾಗೇನಾದರೂ ಇದ್ದರೆ ಅದನ್ನು ಸರಿಪಡಿಸೋಣ. ಅದರ ಕನ್ನಡದ ವರ್ಷನ್ ಏನು ಇದೆ. ಅದು ತಮಗೆ ಸಿಕ್ಕಿಲ್ಲ ಎಂದು ಕಾಣುತ್ತದೆ. ತಾವು ಚೆಕ್ ಮಾಡಿ. ಇದು ಜಾರಿಗೆ ಬರಬೇಕು ಎಂದು ಈಗಾಗಲೇ ಕನ್ನಡ ಅಭಿವೃದ್ಧಿ ಪ್ರಾಧಿಕಾರವನ್ನು ಶಾಸನಬದ್ಧ ಸಂಸ್ಥೆಯನ್ನಾಗಿ ಮಾಡಬೇಕು ಎಂದು ಇದೇ ಅಧಿವೇಶನದಲ್ಲಿ ಆ ಶಾಸನವನ್ನು ತಮ್ಮಗಳ ಒಪ್ಪಿಗೆಗೋಸ್ಕರ ಮಂಡಿಸುತ್ತಿದ್ದೇವೆ. ಸಂವಿಧಾನದ ಇತಿಮಿತಿ ಏನಿದೆಯೊ ಅದನ್ನು ಒಳಪಡಿಸಿಕೊಂಡು ಎಲ್ಲಾ ಹಂತಗಳಲ್ಲೂ ಕನ್ನಡವನ್ನು ಜಾರಿಗೆ ತರಬೇಕು ಎನ್ನುವುದು ರಾಜ್ಯ ಸರ್ಕಾರದ ಆಶಯ, ಅದಕ್ಕೆ

ನಾವು ಕೆಲಸ ಮಾಡುತ್ತಿದ್ದೇವೆ. ಆ ರೀತಿ ಮಾಡುವಾಗ ಸ್ವಲ್ಪ ತೊಡಕು ತೊಂದರೆಗಳು ಬಂದರೆ ಅದನ್ನು ಸ್ವಲ್ಪ ಸಹಾನುಭೂತಿಯಿಂದ ಪರಿಶೀಲನೆ ಮಾಡೋಣ ತಾವು ಉಗ್ರರಾಗಬಾರದು. ಕೆಲವು ಶಾಸನಸಭಾ ವರದಿಗಳು ಇಂಗ್ಲೀಷ್‌ನಲ್ಲಿ ಬಂದಿವೆ. ಶ್ರೀಮಾನ್ ಏಕಾಂತಯ್ಯನವರು ಹೇಳಿದರು. ಕೆಲವು ಸಾರಿ ಅನುಕೂಲತೆಗಳ ಅಭಾವದಿಂದ ಬರುತ್ತದೆ ಎಂದು. ಶಾಸನಸಭಾ ವರದಿಗಳನ್ನು ಈ ಸಭೆಯಲ್ಲಿ ಹರಿಯಬಾರದು ಏಕೆಂದರೆ ಅದು ಶಾಸನಸಭೆಗೇ ಅವಮಾನವಾಗುತ್ತದೆ ಎಂದು ನಾನು ಭಾವನೆ ಮಾಡಿಕೊಂಡಿದ್ದೇನೆ. ಕನ್ನಡದ ಅಭಿವೃದ್ಧಿ ಬಗ್ಗೆ ತಮ್ಮ ಸಲಹೆಗಳು ಏನಿದ್ದರೂ ಕೂಡ ಅದನ್ನು ಸರ್ಕಾರ ಅನುಸರಣೆ ಮಾಡುವುದಕ್ಕೆ ಸಿದ್ಧವಾಗಿದೆ. ಪ್ರಾಥಮಿಕ ದರ್ಜೆಯಿಂದ ಕನ್ನಡದಲ್ಲಿ ಮತ್ತು ಮಾತೃಭಾಷೆಯಲ್ಲಿ ಶಿಕ್ಷಣವನ್ನು ಕೊಡುವುದಕ್ಕೆ ಸರ್ಕಾರ ಈಗ ಎಲ್ಲಾ ತೀರ್ಮಾನ ಮಾಡಿ ಕನ್ನಡ ಮಾತೃಭಾಷೆ ಇರುವವರು ಪ್ರತಿಯೊಬ್ಬರೂ ಕನ್ನಡದಲ್ಲೇ ಓದಬೇಕು ಎಂದು ತೀರ್ಮಾನ ಮಾಡಿದೆ. 1 ರಿಂದ 4ನೇ ಕ್ಲಾಸ್ ನವರೆಗೂ ಬೇರೆ ಮಾತೃಭಾಷೆ ಇರತಕ್ಕಂಥವರು ಉರ್ದು ಆಗಲಿ ಇಂಗ್ಲೀಷ್ ಆಗಲಿ ಅವರಿಗೆ ಅದಕ್ಕೆ ವಿನಾಯಿತಿಯನ್ನು ಕೋರ್ಟಿನ ನಿರ್ಧಾರದಂತೆ ಕೊಟ್ಟಿದೆ. ಆದ್ದರಿಂದ ತಾವು ಇದರ ಬಗ್ಗೆ ಉಗ್ರವಾದ ಪ್ರತಿಭಟನೆ ವ್ಯಕ್ತಪಡಿಸುವಂಥ ಸಂದರ್ಭ ಇಲ್ಲ. ತಮ್ಮ ಸಲಹೆಗಳು ತಮ್ಮ ಕಾಳಜಿ ಸರ್ಕಾರಕ್ಕೆ ಅರ್ಥವಾಗಿದೆ ಮತ್ತು ಶ್ರೀಮಾನ್ ಬೈರೇಗೌಡರು ಕೂಡ ಹೇಳಿದರು ಇದಕ್ಕೆ ಬಹಳ ಮುಖ್ಯವಾದ ಅಂಶವನ್ನು ಬೈರೇಗೌಡರು ಹೇಳಿದ್ದಾರೆ. ಅದೇನೆಂದರೆ, ಬೀದಿಗಳಲ್ಲಿ ಹೋಗಲಿ, ಏರ್ ಪೋರ್ಟ್ ಹೋಗಲಿ, ಎಲ್ಲಿ ಹೋಗಲಿ, ಕನ್ನಡವನ್ನು ಉಪಯೋಗಿಸುತ್ತಿರುವುದು ಕಾಣುತ್ತಿಲ್ಲ ಎಂದು ಹೇಳಿದರು. ಇದು ಬಹಳ ಮುಖ್ಯವಾದ ದೋಷ. ಇದು ಬೆಂಗಳೂರಿನಲ್ಲಿ ಮಾತ್ರ ಇದೆ. ಮುಂಬೈನಲ್ಲಿ ಇಲ್ಲ. ಬೇರೆ ಕಡೆ ಇಲ್ಲ. ಇದಕ್ಕೆ ಕಾರಣ ಏನೆಂದರೆ ಜನರ ಪಾಲಿನ ಕರ್ತವ್ಯವನ್ನು ಜನರು ನಿರ್ವಹಿಸುತ್ತಿಲ್ಲ. ಜನರ ಮಟ್ಟದಲ್ಲಿ ಕನ್ನಡದ ಬಗ್ಗೆ ಕಾಳಜಿ ಬಂದು ಕನ್ನಡವನ್ನೇ ಉಪಯೋಗಿಸಬೇಕು ಎನ್ನುವ ಛಲ ಇಲ್ಲ. ಕಲ್ಕತ್ತದಲ್ಲಿ ಹೋಗಿ, ದೆಹಲಿಯಲ್ಲಿ ಹೋಗಿ, ದಿಲ್ಲಿಯಲ್ಲಿ ಹಿಂದಿ ಬಿಟ್ಟು ಬೇರೆ ಯಾವುದೇ ಭಾಷೆಯಲ್ಲಿ ಮಾತನಾಡುವುದಿಲ್ಲ. ಕಲ್ಕತ್ತದಲ್ಲಿ ಹೋದರೆ ಬಂಗಾಳಿ ಬಿಟ್ಟು ಬೇರೆ ಭಾಷೆಗಳಲ್ಲಿ ಮಾತನಾಡುವುದಿಲ್ಲ. ನಮ್ಮ ದುರದೃಷ್ಟ ಏನೆಂದರೆ ಕರ್ನಾಟಕದಲ್ಲಿ ಇಬ್ಬರು ಕೋಲಾರದವರು ಸೇರಿದರೆ ತೆಲಗು ಮಾತನಾಡುತ್ತಾರೆ. ಇಬ್ಬರು ಹೈದರಾಬಾದ್ - ಕರ್ನಾಟಕದವರು ಸೇರಿದರೆ ಉರ್ದು ಮಾತನಾಡುತ್ತಾರೆ. ಇಬ್ಬರು ದಕ್ಷಿಣಕನ್ನಡ ಉತ್ತರ ಕನ್ನಡದವರು ಸೇರಿದರೆ ತುಳು ಮಾತನಾಡುತ್ತಾರೆ. ನಮ್ಮ ಕನ್ನಡದವರು ಎಲ್ಲಿ ಎಂದು ನಾವು ಹುಡುಕಬೇಕಾಗುತ್ತದೆ. ಹಾಸನ, ತುಮಕೂರು, ಮಂಡ್ಯ ಮುಂತಾದ ಕಡೆಗಳಲ್ಲಿ ಕನ್ನಡ ಮಾತನಾಡುತ್ತಾರೆ. ಆದರೆ ಒಂದೇ ಕಡೆಯವರು ಇಬ್ಬರು ಸೇರಿದರೆ ಈ ರೀತಿಯಾಗುತ್ತದೆ. ಇದೆಲ್ಲ ಬೇರೆ ಬೇರೆ ಭಾಷೆಗಳು ಅಕ್ಕತಂಗಿಯರು ಇದ್ದ ಹಾಗೆ. ಯಾವ ಭಾಷೆಯ ಮೇಲೂ ನಮಗೆ ದ್ವೇಷ ಇಲ್ಲ. ನಮ್ಮ ರಾಷ್ಟ್ರಭಾಷೆ ಅಥವಾ ಸಂಪರ್ಕ ಭಾಷೆ ಹಿಂದಿ ಏನಿದೆ. ಅದರ ಮೇಲೂ ದ್ವೇಷ ಮಾಡಬಾರದು. ಎಲ್ಲವನ್ನೂ ಸೌಹಾರ್ದವಾಗಿ ಬಗೆಹರಿಸೋಣ ಮತ್ತು ಕರ್ನಾಟಕದಲ್ಲಿ ಕನ್ನಡಕ್ಕೆ ಉಚ್ಚ ಸ್ಥಾನನೀಡಬೇಕೆನ್ನುವುದೇ ಸರ್ಕಾರದ ಉದ್ದೇಶ. ಅದಕ್ಕೆ ತಮ್ಮ ಸಲಹೆ ಸಹಕಾರಗಳನ್ನು ಕೊಡಿ. ಏನಾದರೂ ದೋಷಗಳಿದ್ದರೆ ನಮ್ಮ ಗಮನಕ್ಕೆ ತನ್ನಿ. ಅದನ್ನು ಸರಿಪಡಿಸೋಣ.

ಶ್ರೀ ಸಿ.ಬೈರೇಗೌಡ : ನಾನು ಹೇಳಿರುವಂಥದ್ದು ಏನೆಂದರೆ ಕನ್ನಡ ಪತ್ರಿಕೆಗಳನ್ನು ವಿಮಾನದಲ್ಲಿ ಕೊಡುವುದಿಲ್ಲ ಮತ್ತು ಬೆಂಗಳೂರು ವಿಮಾನ ನಿಲ್ದಾಣದಲ್ಲಿ ಕನ್ನಡಕ್ಕೆ ಸ್ಥಾನವೇ ಇಲ್ಲ. ನೀವು ಅಂಥವರಿಗೆ ತೀವ್ರವಾಗಿ ಹೇಳಬೇಕು. ನೀವು ಕನ್ನಡಕ್ಕೆ ಆದ್ಯತೆಯನ್ನು, ಪ್ರಥಮ ಸ್ಥಾನವನ್ನು ಕೊಡದಿದ್ದರೆ ಇಲ್ಲಿ ವಿಮಾನ ನಿಲ್ದಾಣ ಬೇಡ ಎಂದು ಅವರಿಗೆ ಹೇಳಬೇಕಾಗುತ್ತದೆ. ಅಲ್ಲಿಗೆ ಹೋದರೆ ಎಲ್ಲಾ ಭಾಷೆಯ

ಪತ್ರಿಕೆಗಳಿರುತ್ತವೆ, ಕನ್ನಡ ಮಾತ್ರ ಇರುವುದಿಲ್ಲ. ಕನ್ನಡ ಈ ದೇಶದ ಭಾಷೆಯಲ್ಲವೇನು? ಕೇಳಿದರೆ ಅವಮಾನ. ವಿಮಾನ ನಿಲ್ದಾಣದಲ್ಲೇ ಅಲ್ಲ, ವಿಮಾನದಲ್ಲೂ ಕೂಡ ಕನ್ನಡ ಪತ್ರಿಕೆ ಇದೆಯೇ ಎಂದು ಕೇಳುವುದೇ ಅವಮಾನ ಎನ್ನತಕ್ಕಂಥ ಪರಿಸ್ಥಿತಿ ಇವತ್ತು ಉದ್ಭವವಾಗಿದೆ. ಅದರಿಂದ ದಯವಿಟ್ಟು ವಿಮಾನ ವ್ಯವಸ್ಥೆ ಏನಿದೆ, ಅವರಿಗೆ ದಯವಿಟ್ಟು ತೀವ್ರವಾಗಿ ಪತ್ರ ಬರೆಯಿರಿ.

ಶ್ರೀ ಹಾರನಹಳ್ಳಿ ರಾಮಸ್ವಾಮಿ : ಬರೆಯೋಣ.

ಶ್ರೀ ಸಿ. ಬೈರೇಗೌಡ : ಬರೆಯದಿದ್ದರೆ ನಾವು ವಿಮಾನ ನಿಲ್ದಾಣಕ್ಕೆ ನುಗ್ಗಬೇಕಾಗುತ್ತದೆ. ಇದನ್ನು ತಾವು ದಯವಿಟ್ಟು ಅರ್ಥಮಾಡಿಕೊಳ್ಳಿ.

ಶ್ರೀ ಹಾರನಹಳ್ಳಿ ರಾಮಸ್ವಾಮಿ : ವಿಮಾನ ನಿಲ್ದಾಣದವರಿಗೂ ಸಹ ನಾವು ತಿಳಿಸೋಣ.

ಶ್ರೀ ಡಿ.ಬಿ. ಚಂದ್ರೇಗೌಡ : ಕಳೆದ ವರ್ಷ ಏಪ್ರಿಲ್ 1ನೇ ತಾರೀಖಿನಿಂದ ಕನ್ನಡ ಅಭಿವೃದ್ಧಿ ಪ್ರಾಧಿಕಾರ, ವ್ಯವಹಾರವೆಲ್ಲ ಕನ್ನಡದಲ್ಲಿ ಇಲ್ಲಿ ವಿಧಾನಸೌಧದ ನಾಲ್ಕು ದ್ವಾರಗಳಲ್ಲಿ ಮುಖ್ಯಮಂತ್ರಿಗಳದ್ದು ಮತ್ತು ಕನ್ನಡ ಸಂಸ್ಕೃತಿ ಇಲಾಖೆಯ ಸಚಿವರ ಭಾವಚಿತ್ರಗಳನ್ನು ಹಾಕಿ ಎಲ್ಲಾ ಪ್ರದರ್ಶನ ಮಾಡಿದ್ದೀರಿ. ಕಳೆದ ಹತ್ತು ತಿಂಗಳಿಂದ ಈ ಪ್ರಾಧಿಕಾರ ಮಾಡಿರತಕ್ಕಂಥ ಕೆಲಸವೇನು? ಇದರ ಬಗ್ಗೆ ಒಂದು ಸಮಗ್ರವಾದ ವರದಿಯನ್ನು ಇಲ್ಲಿ ಬಿಟ್ಟರೆ ಬಹುಶಃ ಸ್ವಲ್ಪ ಹೆಚ್ಚು ಕಡಿಮೆ ನಮಗೆ ಇರತಕ್ಕಂಥ ಎಲ್ಲಾ ಭಿನ್ನಾಭಿಪ್ರಾಯಗಳನ್ನು ದೂರ ಮಾಡುವುದಕ್ಕೆ ಸಾಧ್ಯವಾಗುತ್ತದೆ.

ಆಮೇಲೆ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಮಂತ್ರಿಗಳು ಕೆಲವು ಘೋಷಣೆಗಳನ್ನು ಹೊರಡಿಸಿದ್ದಾರೆ. ಕನ್ನಡಕ್ಕಾಗಿ ಅವರದೇ ಆದಂತಹ ಒಂದು ಚಳುವಳಿ. ಆ ಚಳುವಳಿಯಲ್ಲಿ ಅವರು ಮಾಡಿರತಕ್ಕ ಕೆಲಸ ಕಾರ್ಯಗಳು ಏನು? ಮೊದಲು ವಿಧಾನಸೌಧದ ಮೂರನೇ ಮಹಡಿಯಿಂದ ಕನ್ನಡ ಆಡಳಿತ ಭಾಷೆ ಎನ್ನುವಂತಹ ಅಭಿಪ್ರಾಯ ನಮ್ಮ ಗ್ರಾಮೀಣ ಜನಕ್ಕೆ ಬರದ ಹೊರತು ಇದು ಸಾಧ್ಯವಿಲ್ಲ. ನಮ್ಮ ಗ್ರಾಮೀಣ ಪ್ರದೇಶದ ಜನ ಇವತ್ತೂ ಐಎಎಸ್ ಅಧಿಕಾರಿಗಳನ್ನು ನೋಡುವಾಗ ಯಾರನ್ನಾದರೂ ಜೊತೆಯಲ್ಲಿ ಕರೆದುಕೊಂಡು ಹೋಗಬೇಕು. ಏಕೆಂದರೆ ಅವರಿಗೆ ಕನ್ನಡ ತಿಳಿಯುವುದಿಲ್ಲ, ಇಂಗ್ಲೀಷ್ನಲ್ಲಿ ಹೇಳಬೇಕು ಎನ್ನುತ್ತಾರೆ. ಈ ಸ್ಥಿತಿ ಇದೆ. ಆದ್ದರಿಂದ ವಾಸ್ತಾವಾಂಶಗಳನ್ನು ಗಮನದಲ್ಲಿಟ್ಟುಕೊಂಡು, ಪ್ರಾಧಿಕಾರ ವಿಶೇಷವಾಗಿ ತೆಗೆದುಕೊಂಡಿರತಕ್ಕ ಹತ್ತು ತಿಂಗಳ ಕಾರ್ಯಕ್ರಮ ಏನು ಇದೆ, ಅದರ ವರದಿಯನ್ನು ಈ ಸದನಕ್ಕೆ ಈ ಸಂದರ್ಭದಲ್ಲಿ ಕೊಡುವುದಕ್ಕೆ ವಿರ್ಪಾಡು ಮಾಡಿಕೊಡಬೇಕೆಂದು ನನ್ನ ಒಂದು ಪ್ರಾರ್ಥನೆ.

ಶ್ರೀ ಹಾರನಹಳ್ಳಿ ರಾಮಸ್ವಾಮಿ : ಕನ್ನಡ ಅಭಿವೃದ್ಧಿ ಪ್ರಾಧಿಕಾರ ಈಗ ಹತ್ತು ತಿಂಗಳಿಂತದ ಮಾಡಿರತಕ್ಕ ಕೆಲಸದ ಬಗ್ಗೆ ಒಂದು ವರದಿಯನ್ನು ಈ ಸಭೆಗೆ ಕೊಡುವುದಕ್ಕೆ ವಿರ್ಪಾಡು ಮಾಡುತ್ತೇನೆ.

ಶ್ರೀ ವಾಟಾಳ್ ನಾಗರಾಜ್ : ಮಾನ್ಯ ಮಂತ್ರಿಗಳು ಹಸಿ ಸುಳ್ಳು ಹೇಳುತ್ತಿದ್ದಾರೆ. ನಿಮ್ಮಲ್ಲಿ ಕನ್ನಡ ಆಡಳಿತ ಭಾಷೆ ಮಾಡುವುದಕ್ಕೆ ಕ್ರಿಯಾತ್ಮಕವಾದಂತಹ ಒಂದು ಹೃದಯ ಬೇಕು, ಆದರೆ ಅದು ಇಲ್ಲ. ಆಡಳಿತ ಭಾಷೆ ಕನ್ನಡ ಎಂದು ಬರೇ ಘೋಷಣೆ ಮಾಡುತ್ತಿದ್ದೀರಿ. ಹತ್ತು ತಿಂಗಳಿಂದ ಏನೂ ನಡೆದಿಲ್ಲ. ಬರೇ ಘೋಷಣೆ, ಭರವಸೆ ಕೊಡುತ್ತಿದ್ದೀರಿ. ಆದ್ದರಿಂದ ಮನನೊಂದು ಬಹಳ ನೋವಿನಿಂದ ಸಭಾತ್ಯಾಗ ಮಾಡುತ್ತಿದ್ದೇನೆ. ನಿಮ್ಮ ಸರ್ಕಾರ ಕನ್ನಡ ವಿರೋಧಿ ಸರ್ಕಾರ. ಕನ್ನಡದ ಬಗ್ಗೆ ಖಂಡಿತವಾಗಿ ನಿಮಗೆ ಸ್ವಲ್ಪವೂ ಕಾಳಜಿ ಇಲ್ಲ ಎಂದು ಹೇಳುತ್ತೇನೆ. ಕನ್ನಡದ ಬಗ್ಗೆ ಏನೇನೂ ನಡೆದಿಲ್ಲ.

(ಮಾನ್ಯ ವಾಟಾಳ್ ನಾಗರಾಜ್ ಅವರು ಸಭಾತ್ಯಾಗ ಮಾಡಿದರು)

(ಗೊಂದಲ)

ಶ್ರೀ ಜೆ.ಸಿ. ಮಧುಸ್ವಾಮಿ : 165 ಸುತ್ತೋಲೆಯನ್ನು ತಾವು ಕನ್ನಡದ ಬಗ್ಗೆ ಕೊಟ್ಟಿರುವುದು.

ಶ್ರೀ ಹಾರ್ನಳ್ಳಿ ರಾಮಸ್ವಾಮಿ : ಈ ವಿಷಯವನ್ನು ಮಾನ್ಯ ವಾಟಾಳ್ ನಾಗರಾಜ್ ಅವರು ರಾಜಕೀಯಕ್ಕೆ ಉಪಯೋಗಿಸುತ್ತಿದ್ದಾರೆ. ಇದು ಸರಿಯಲ್ಲ ಎಂದು ಮಾತ್ರ ಹೇಳುವುದಕ್ಕೆ ನಾನು ಇಷ್ಟಪಡುತ್ತೇನೆ.

ಅಧ್ಯಕ್ಷರು : ಈಗ ಸದನದಲ್ಲಿ ಕನ್ನಡದ ಬಗ್ಗೆ ಎಲ್ಲರೂ ಅಭಿಮಾನ ಪಟ್ಟು ಮಾತನಾಡಿದರು. ನನ್ನ ಮನಸ್ಸಿಗೆ ಸ್ವಲ್ಪ ಏನು ಅನಿಸಿತು ಎಂದರೆ ನಮ್ಮ ಸಾರ್ವಜನಿಕ ಲೆಕ್ಕ ಪತ್ರ ಮತ್ತು ಸಾರ್ವಜನಿಕ ಉದ್ದಿಮೆಗಳ ಸಮಿತಿಗಳ ವರದಿ ಪ್ರತಿಯನ್ನು ಹರಿದಿದ್ದು ನನಗೆ ಅಷ್ಟೇನೂ ಸರಿ ಎನಿಸಲಿಲ್ಲ. ಅದನ್ನು ತಮ್ಮ ಗಮನಕ್ಕೆ ತರುತ್ತಿದ್ದೇನೆ. ಎರಡು ಸಮಿತಿಗಳನ್ನು ಬಿಟ್ಟು ಉಳಿದೆಲ್ಲ ಸಮಿತಿಗಳ ವ್ಯವಹಾರವನ್ನು ನಾವು ಕನ್ನಡದಲ್ಲಿ ಮಾಡುತ್ತಿದ್ದೇವೆ. ಇನ್ನು ಮುಂದೆ ಇವು ಎಂದು ಸಹ ಕನ್ನಡದಲ್ಲಿ ಮಾಡಲಿಕ್ಕೆ ಅನುಕೂಲತೆ ಮಾಡಬಹುದು.

ಶ್ರೀ ಹೆಚ್. ವಿಶ್ವನಾಥಯ್ಯ : ಮಾನ್ಯ ಅಧ್ಯಕ್ಷರೆ, ನನಗೆ ಅನುಮತಿ ಕೊಡಬೇಕು. ಸಾರ್ವಜನಿಕ ಲೆಕ್ಕ ಪತ್ರ ಸಮಿತಿಯ ಅಧ್ಯಕ್ಷನಾಗಿ ನಾನು ಹೇಳುತ್ತಿದ್ದೇನೆ. ಎಲ್ಲಿಯವರೆಗೆ ನೀವು ಸಿ ಅಂಡ್ ಎಜಿ ರಿಪೋರ್ಟ್‌ನ್ನು ಕನ್ನಡದಲ್ಲಿ ಇರುವುದಿಲ್ಲ, ಅಲ್ಲಿಯವರೆಗೆ ಅದು ಸಾಧ್ಯ ಆಗುವುದಿಲ್ಲ. ಅಭಿವೃದ್ಧಿ ಪ್ರಾಧಿಕಾರ ಮತ್ತು ಸಿ ಅಂಡ್ ಎಜಿ ಅವರು ಏನು ರಿಪೋರ್ಟ್ ಕೊಡುತ್ತಿದ್ದಾರೆ ಅವನ್ನು ಕನ್ನಡದಲ್ಲಿ ತರ್ಜುಮೆ ಮಾಡಿ ಈ ಮನೆಯ ಮುಂದೆ ಇಡುವ ಹಾಗೆ ಮಾಡಿ. ತದನಂತರ ಇದನ್ನು ಹೇಳುವುದರಲ್ಲಿ ಅರ್ಥ ಎಂಬುದನ್ನು ನಾನು ಸರ್ಕಾರದ ಗಮನಕ್ಕೆ ತರುತ್ತಿದ್ದೇನೆ.

ಅಧ್ಯಕ್ಷರು : ನಾನು ಅದಕ್ಕೆ ಅವಕಾಶ ಅನುಕೂಲತೆಗಳನ್ನು ಮಾಡಿಕೊಡುತ್ತೇನೆ.

ಗಮನ ಸೆಳೆಯುವ ಸೂಚನೆಗಳು

ಕೈಮಗ್ಗ ನಿಗಮದಲ್ಲಿ ಕೆಲಸ ಮಾಡುವ ನೇಕಾರರಿಗೆ ನೂಲು ಮತ್ತು ಆರ್ಥಿಕ ನೆರವು ಸಿಗದೆ ತೊಂದರೆಯಾಗಿರುವುದರ ಬಗ್ಗೆ

ಶ್ರೀ ಆರ್.ವಿ. ದೇಶಪಾಂಡೆ (ವಿರೋಧ ಪಕ್ಷದ ನಾಯಕರು) : ಮಾನ್ಯ ಅಧ್ಯಕ್ಷರೆ, ಕೈಮಗ್ಗ ನಿಗಮದಲ್ಲಿ ಕೆಲಸ ಮಾಡುವ ನೇಕಾರರಿಗೆ ನೂಲು ಮತ್ತು ಆರ್ಥಿಕ ನೆರವು ಸಿಗದೇ ಕಷ್ಟವಾಗಿರುವುದನ್ನು ಮಾನ್ಯ ಜವಳಿ ಖಾತೆಯ ರಾಜ್ಯಮಂತ್ರಿಗಳ ಗಮನಕ್ಕೆ ತರಬಯಸುತ್ತೇನೆ.

ಶ್ರೀ ಹೆಚ್.ಕೆ. ಪಾಟೀಲ್ (ಜವಳಿ ರಾಜ್ಯ ಸಚಿವರು) : ಮಾನ್ಯ ಅಧ್ಯಕ್ಷರೆ, ತಮ್ಮ ಅಪ್ಪಣೆ ಪಡೆದು ಈ ಹೇಳಿಕೆಯನ್ನು ಮಾಡುತ್ತೇನೆ :

ಕರ್ನಾಟಕ ಕೈಮಗ್ಗ ಅಭಿವೃದ್ಧಿ ನಿಗಮದ ಬಳಿ ಉತ್ಪಾದಿತ ಬಟ್ಟೆಯ ದಾಸ್ತಾನು ಶೇಖರಣೆಯಾದ ಕಾರಣ ನಿಗಮವು ತೀವ್ರ ಆರ್ಥಿಕ ಮುಗ್ಗಟ್ಟಿನ ಪರಿಸ್ಥಿತಿ ಎದುರಿಸುತ್ತಿದೆ. ಇದರಿಂದಾಗಿ ನಿಗಮವು ಸಕಾಲದಲ್ಲಿ ಹಣ ಪಾವತಿ ಮಾಡದ ಕಾರಣ ನೂಲು ಸರಬರಾಜಿನಲ್ಲಿ ಅಡಚಣೆ ಉಂಟಾಗಿರುತ್ತದೆ.

ಜನವರಿ 94ರಿಂದ ಹತ್ತಿ ಬೆಲೆಯಲ್ಲಿ ತೀವ್ರ ಹೆಚ್ಚಳ ಉಂಟಾಗಿ ನೂಲಿನ ಬೆಲೆಯಲ್ಲಿ ಪ್ರತಿ ಶತ 20 ರಿಂದ 40 ರಷ್ಟು ಹೆಚ್ಚಳ ಆಗಿದೆ.